**B**

**CCE RR**
**Revised & Unrevised**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2019**

**S.S.L.C. EXAMINATION, JUNE, 2019**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 24. 06. 2019 ] ಸಂಕೇತ ಸಂಖ್ಯೆ : **97-K**

Date : 24. 06. 2019 ] CODE NO. : **97-K**

# ವಿಷಯ : ರಾಜ್ಯಶಾಸ್ತ್ರ

# Subject : POLITICAL SCIENCE

**(ಕನ್ನಡ ಭಾಷಾಂತರ / Kannada Version)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

**[ ಗರಿಷ್ಠ ಅಂಕಗಳು : 80**

**[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** 10 × 1 = 10 | |
| 1. | ಗ್ರಾಮ ಪಂಚಾಯಿತಿಗಳು ಭಾರತ ಸ್ವಾಯತ್ತ ಸರ್ಕಾರದ ತಳಹದಿಯಾಗಿವೆ ಎಂದು ಹೇಳಿದವರು<br>(A) ಡಾ. ಬಿ.ಆರ್. ಅಂಬೇಡ್ಕರ್<br>(B) ಜ್ಯೋತಿಬಾ ಫುಲೆ<br>(C) ಹೆಚ್.ಜೆ. ಲಾಸ್ಕಿ<br>(D) ಮಹಾತ್ಮ ಗಾಂಧಿ<br>***ಉತ್ತರ :*** (D) ಮಹಾತ್ಮ ಗಾಂಧಿ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ರಾಜ್ಯಪಾಲರು ಈ ಸಮುದಾಯದ ಒಬ್ಬರನ್ನು ರಾಜ್ಯ ವಿಧಾನಸಭೆಗೆ ನಾಮಕರಣ ಮಾಡುವುರು<br>(A) ಆಂಗ್ಲೋ–ಅಮೆರಿಕನ್ ಸಮುದಾಯದಿಂದ<br>(B) ಆಂಗ್ಲೋ–ಇಂಡಿಯನ್ ಸಮುದಾಯದಿಂದ<br>(C) ಆಂಗ್ಲೋ–ಯುರೋಪಿಯನ್ ಸಮುದಾಯದಿಂದ<br>(D) ಆಂಗ್ಲೋ–ಆಫ್ರಿಕನ್ ಸಮುದಾಯದಿಂದ<br>***ಉತ್ತರ :*** (B) ಆಂಗ್ಲೋ–ಇಂಡಿಯನ್ ಸಮುದಾಯದಿಂದ | 1 |
| 3. | ಭೂಕಂದಾಯ ದಾಖಲೆಗಳ ಸಂರಕ್ಷಣೆ, ತೆರಿಗೆ ವಸೂಲಾತಿಗೆ ಸಂಬಂಧಿಸಿದ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ನ್ಯಾಯಾಲಯ<br>(A) ಕಂದಾಯ ನ್ಯಾಯಾಲಯ<br>(B) ಜಿಲ್ಲಾ ನ್ಯಾಯಾಲಯ<br>(C) ಗ್ರಾಹಕ ನ್ಯಾಯಾಲಯ<br>(D) ಲೋಕ ಅದಾಲತ್<br>***ಉತ್ತರ :*** (A) ಕಂದಾಯ ನ್ಯಾಯಾಲಯ | 1 |
| 4. | ರಾಜ್ಯ ಕಾರ್ಯಾಂಗದ ಸಂವಿಧಾನಾತ್ಮಕ ಮುಖ್ಯಸ್ಥರು<br>(A) ಮುಖ್ಯಮಂತ್ರಿಗಳು<br>(B) ಸಭಾಪತಿಗಳು<br>(C) ರಾಜ್ಯಪಾಲರು<br>(D) ಉಪಸಭಾಪತಿಗಳು<br>***ಉತ್ತರ :*** (C) ರಾಜ್ಯಪಾಲರು | 1 |
| 5. | ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರ ನಿವತ್ತಿ ವಯಸ್ಸು<br>(A) 60 ವರ್ಷಗಳು<br>(B) 65 ವರ್ಷಗಳು<br>(C) 62 ವರ್ಷಗಳು<br>(D) 58 ವರ್ಷಗಳು<br>***ಉತ್ತರ :*** (B) 65 ವರ್ಷಗಳು | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 6. | ಭಾರತದ ರಾಷ್ಟ್ರಪತಿಗಳು ರಾಜ್ಯಸಭೆಗೆ ನಾಮಕರಣ ಮಾಡುವ ಸದಸ್ಯರ ಸಂಖ್ಯೆ<br>(A) 20 (B) 10<br>(C) 12 (D) 18<br>***ಉತ್ತರ :*** (C) 12 | 1 |
| 7. | ಜಪಾನಿನ ಶಾಸಕಾಂಗ<br>(A) ಪಾರ್ಲಿಮೆಂಟ್ (B) ಶ್ಲೆಂಗ್‌ಡು<br>(C) ಕಾಂಗ್ರೆಸ್ (D) ಡಯಟ್<br>***ಉತ್ತರ :*** (D) ಡಯಟ್ | 1 |
| 8. | ಭಾರತದ ರಾಷ್ಟ್ರಪತಿಗಳು ಪ್ರಮಾಣವಚನ ಸ್ವೀಕರಿಸುವುದು<br>(A) ಭಾರತದ ಉಪರಾಷ್ಟ್ರಪತಿಗಳಿಂದ<br>(B) ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಂದ<br>(C) ಭಾರತದ ಪ್ರಧಾನ ಮಂತ್ರಿಗಳಿಂದ<br>(D) ಲೋಕಸಭೆಯ ಸಭಾಪತಿಗಳಿಂದ<br>***ಉತ್ತರ :*** (B) ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಂದ | 1 |
| 9. | "ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಇರುವ ಸರ್ಕಾರವೇ ಪ್ರಜಾಪ್ರಭುತ್ವ" ಎಂದು ಹೇಳಿದವರು<br>(A) ಅಬ್ರಹಾಂ ಲಿಂಕನ್ (B) ಜೆ.ಎಸ್. ಮಿಲ್<br>(C) ಪೆರಿಕ್ಲಸ್ (D) ಕಾರ್ಲ್ ಮಾರ್ಕ್ಸ್<br>***ಉತ್ತರ :*** (A) ಅಬ್ರಹಾಂ ಲಿಂಕನ್ | 1 |
| 10. | ಕಲ್ಕತ್ತದಲ್ಲಿ ಸರ್ವೋಚ್ಚ ನ್ಯಾಯಾಲಯವನ್ನು ಸ್ಥಾಪಿಸಿದ ಶಾಸನ<br>(A) ಮಾರ್ಲೆಮಿಂಟೋ ಸುಧಾರಣೆಗಳು 1909<br>(B) 1833 ರ ಸನ್ನದು<br>(C) ರೆಗ್ಯುಲೇಟಿಂಗ್ ಆ್ಯಕ್ಟ್ 1773<br>(D) 1858 ರ ಶಾಸನ<br>***ಉತ್ತರ :*** (C) ರೆಗ್ಯುಲೇಟಿಂಗ್ ಆ್ಯಕ್ಟ್ 1773 | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| II. | ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** $5 \times 1 = 5$ | |
| 11. | ***A* ಪಟ್ಟಿ** — ***B* ಪಟ್ಟಿ** | |
| | (A) ರಾಷ್ಟ್ರಪತಿಗಳು — (i) ರಾಜ್ಯಸಭೆಯ ಮುಖ್ಯಸ್ಥರು | |
| | (B) ಉಪರಾಷ್ಟ್ರಪತಿಗಳು — (ii) ರಾಜ್ಯದ ಪ್ರಥಮ ಪ್ರಜೆ | |
| | (C) ಪ್ರಧಾನಮಂತ್ರಿಗಳು — (iii) ವಿಧಾನ ಪರಿಷತ್ ಮುಖ್ಯಸ್ಥರು | |
| | (D) ಸಭಾಪತಿಗಳು — (iv) ಕೇಂದ್ರಾಡಳಿತ ಪ್ರದೇಶದ ಮುಖ್ಯಮಂತ್ರಿ | |
| | (E) ರಾಜ್ಯಪಾಲರು — (v) ರಾಷ್ಟ್ರದ ಪ್ರಥಮ ಪ್ರಜೆ | |
| | (vi) ಲೋಕಸಭೆಯ ಮುಖ್ಯಸ್ಥರು | |
| | (vii) ಕೇಂದ್ರ ಸರ್ಕಾರದ ಮುಖ್ಯಸ್ಥರು | |
| | ***ಉತ್ತರ :*** | |
| | ***A* ಪಟ್ಟಿ** — ***B* ಪಟ್ಟಿ** | |
| | (A) ರಾಷ್ಟ್ರಪತಿಗಳು — (v) ರಾಷ್ಟ್ರದ ಪ್ರಥಮ ಪ್ರಜೆ | 1 |
| | (B) ಉಪರಾಷ್ಟ್ರಪತಿಗಳು — (i) ರಾಜ್ಯಸಭೆಯ ಮುಖ್ಯಸ್ಥರು | 1 |
| | (C) ಪ್ರಧಾನಮಂತ್ರಿಗಳು — (vii) ಕೇಂದ್ರ ಸರ್ಕಾರದ ಮುಖ್ಯಸ್ಥರು | 1 |
| | (D) ಸಭಾಪತಿಗಳು — (vi) ಲೋಕಸಭೆಯ ಮುಖ್ಯಸ್ಥರು | 1 |
| | (E) ರಾಜ್ಯಪಾಲರು — (ii) ರಾಜ್ಯದ ಪ್ರಥಮ ಪ್ರಜೆ | 1 |
| III. | **ಈ ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** $15 \times 1 = 15$ | |
| 12. | ಕರ್ನಾಟಕ ಲೋಕಸೇವಾ ಆಯೋಗದ ಕೇಂದ್ರ ಕಚೇರಿ ಎಲ್ಲಿದೆ ? | |
| | ***ಉತ್ತರ :*** | |
| | ಬೆಂಗಳೂರು | 1 |
| 13. | ಭಾರತದ ಸ್ಥಳೀಯ ಸರ್ಕಾರ ವ್ಯವಸ್ಥೆಯ ಪಿತಾಮಹ ಎಂದು ಯಾರನ್ನು ಕರೆಯಲಾಗಿದೆ ? | |
| | ***ಉತ್ತರ :*** | |
| | ಲಾರ್ಡ್ ರಿಪ್ಪನ್ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 14. | ಲೋಕ ಅದಾಲತ್ತನ್ನು ಏಕೆ ಸ್ಥಾಪಿಸಲಾಗಿದೆ ?<br>***ಉತ್ತರ :***<br>ನ್ಯಾಯ ವಿತರಣೆಯಲ್ಲಿ ಆಗುತ್ತಿರುವ ವಿಳಂಬ ತಪ್ಪಿಸಲು | 1 |
| 15. | ಗ್ರಾಹಕ ನ್ಯಾಯಾಲಯಗಳನ್ನು ಏಕೆ ಸ್ಥಾಪಿಸಲಾಗಿದೆ ?<br>***ಉತ್ತರ :***<br>ಗ್ರಾಹಕರ ಹಕ್ಕುಗಳ ರಕ್ಷಣೆಗಾಗಿ | 1 |
| 16. | ಕೋರಂ ಎಂದರೇನು ?<br>***ಉತ್ತರ :***<br>ಸದನದ ಕಾರ್ಯಕಲಾಪಗಳನ್ನು ನಡೆಸಲು ಸದನದಲ್ಲಿ ಹಾಜರಿರಬೇಕಾದ ಸದಸ್ಯರ ಕನಿಷ್ಠ ಸಂಖ್ಯೆ | 1 |
| 17. | ರಾಜ್ಯಪಾಲರಿಗೆ ವೇತನವನ್ನು ಯಾವ ನಿಧಿಯಿಂದ ನೀಡಲಾಗುತ್ತದೆ ?<br>***ಉತ್ತರ :***<br>ರಾಜ್ಯ ಸಂಚಯಿತ ನಿಧಿ | 1 |
| 18. | ದೇಶದಲ್ಲಿ ಅತ್ಯಂತ ಹೆಚ್ಚು ವಿಧಾನಸಭಾ ಸದಸ್ಯರನ್ನು ಹೊಂದಿರುವ ರಾಜ್ಯ ಯಾವುದು ?<br>***ಉತ್ತರ :***<br>ಉತ್ತರ ಪ್ರದೇಶ | 1 |
| 19. | ರಾಜ್ಯ ಸರ್ಕಾರದ ಸಮಸ್ತ ಅಧಿಕಾರದ ಸೂತ್ರದಾರ ಯಾರು ?<br>***ಉತ್ತರ :***<br>ಮುಖ್ಯಮಂತ್ರಿಗಳು | 1 |
| 20. | ಭಾರತದ ಸರ್ವೋಚ್ಚ ನ್ಯಾಯಾಲಯವು ತನ್ನ ವಿಶೇಷ ಅನುಮತಿ ಅರ್ಜಿ ಅಧಿಕಾರವನ್ನು ಹೇಗೆ ಚಲಾಯಿಸುತ್ತದೆ ?<br>***ಉತ್ತರ :***<br>ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧೀಕರಣ ಕೊಟ್ಟ ತೀರ್ಪು, ಡಿಕ್ರಿ, ನಿರ್ಧರಣೆ ಆದೇಶಗಳ ವಿರುದ್ಧ ಅಪೀಲು ಹೂಡುವ ಅನುಮತಿ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 21. | ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ವೇತನ ಮತ್ತು ಭತ್ಯೆಗಳನ್ನು ನಿರ್ಧರಿಸುವವರು ಯಾರು ?<br>***ಉತ್ತರ :***<br>ಭಾರತದ ಸಂಸತ್ತು | 1 |
| 22. | ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಧೀಶರನ್ನು ನೇಮಕ ಮಾಡುವವರು ಯಾರು ?<br>***ಉತ್ತರ :***<br>ಭಾರತದ ರಾಷ್ಟ್ರಪತಿಗಳು | 1 |
| 23. | ಅಮೆರಿಕಾ ಸಂಯುಕ್ತ ಸಂಸ್ಥಾನದ ಮೇಲ್ಮನೆಯನ್ನು ಏನೆಂದು ಕರೆಯಲಾಗಿದೆ ?<br>***ಉತ್ತರ :***<br>ಸೆನೆಟ್ | 1 |
| 24. | ಭಾರತದ ರಾಷ್ಟ್ರಪತಿ ಚುನಾವಣಾ ವಿಧಾನವನ್ನು ಯಾವ ಸಂವಿಧಾನದಿಂದ ಎರವಲು ಪಡೆಯಲಾಗಿದೆ ?<br>***ಉತ್ತರ :***<br>ಐರ್ಲೆಂಡ್‌ನ ಸಂವಿಧಾನ | 1 |
| 25. | ಭಾರತ ಸಂವಿಧಾನದ 21A ವಿಧಿಯ ಪ್ರಾಮುಖ್ಯತೆ ಏನು ?<br>***ಉತ್ತರ :***<br>ಶಿಕ್ಷಣ ಹಕ್ಕು ಕಾಯ್ದೆ | 1 |
| 26. | ಭಾರತದಲ್ಲಿ ಸಂವಿಧಾನದ ರಚನಾ ಸಭೆಯನ್ನು ಸ್ಥಾಪಿಸಬೇಕೆಂದು ಬಲವಾಗಿ ಆಗ್ರಹಪಡಿಸಿದವರು ಯಾರು ?<br>***ಉತ್ತರ :***<br>ಮನ್ವೇಂದ್ರನಾಥ ರಾಯ್ | 1 |
| IV. | **ಈ ಕೆಳಗಿನ ಪ್ರಶ್ನೆಗಳಿಗೆ *ಎರಡರಿಂದ ಮೂರು* ವಾಕ್ಯಗಳಲ್ಲಿ ಉತ್ತರಿಸಿ :** $14 \times 2 = 28$ | |
| 27. | ಯಾವ ರಾಜ್ಯಗಳು ಜಂಟಿ ಲೋಕಸೇವಾ ಆಯೋಗವನ್ನು ಸ್ಥಾಪನೆ ಮಾಡಿಕೊಂಡಿವೆ ?<br>***ಉತ್ತರ :***<br>ಅಸ್ಸಾಂ, ಸಿಕ್ಕಿಂ, ಮೇಘಾಲಯ, ತ್ರಿಪುರ, ಅರುಣಾಚಲಪ್ರದೇಶ, ನಾಗಾಲ್ಯಾಂಡ್ ಮತ್ತು ಮಿಜೋರಾಂ. (ಯಾವುದಾದರೂ ನಾಲ್ಕು) | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 28. | ಗ್ರಾಮಸಭೆಯು ಗ್ರಾಮೀಣ ಸ್ವಯಂ ಆಡಳಿತ ಸಂಸ್ಥೆಯ ಪ್ರಾಥಮಿಕ ಘಟಕವಾಗಿದೆ. ವಿವರಿಸಿ.<br>*ಉತ್ತರ :*<br>— ನೊಂದಾಯಿತ ಮತದಾರರೆಲ್ಲರೂ ಸದಸ್ಯರು<br>— ಜನರ ಯೋಗಕ್ಷೇಮಕ್ಕಾಗಿ ಕೆಲಸ<br>— ಹಳ್ಳಿಯ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳು | 2 |
| 29. | ಜಿಲ್ಲಾ ಪಂಚಾಯಿತಿಯ ಹಣಕಾಸಿನ ಮೂಲಗಳು ಯಾವುವು ?<br>*ಉತ್ತರ :*<br>— ರಾಜ್ಯ ಸರ್ಕಾರದ ನಿಧಿಯಿಂದ ಜಿಲ್ಲಾ ಪಂಚಾಯಿತಿಗೆ ವರ್ಗಾಯಿಸಲ್ಪಟ್ಟ ಹಣ<br>— ರಾಜ್ಯ ಸರ್ಕಾರದಿಂದ ನೀಡಲಾದ ಅನುದಾನ, ಸಾಲಗಳು<br>— ತೆರಿಗೆ, ಶುಲ್ಕ ಹಾಗೂ ಜುಲ್ಮಾನೆಗಳಿಂದ ಬರುವ ಆದಾಯ<br>— ಪಂಚಾಯಿತಿಯ ಬಾಡಿಗೆಯಿಂದ ಬರುವ ಆದಾಯ | 2 |
| 30. | ರಾಜ್ಯ ಶಾಸಕಾಂಗದಲ್ಲಿ ವಿಧಾನ ಪರಿಷತ್ತಿನ ಅಗತ್ಯತೆ ಪ್ರಮುಖವಾಗಿದೆ. ಏಕೆ ?<br>*ಉತ್ತರ :*<br>— ವಿಧಾನಸಭೆಯ ಕಾರ್ಯದ ಒತ್ತಡ ಕಡಿಮೆ ಮಾಡಲು<br>— ಆತುರದ ಮಸೂದೆಗಳು ಕಾನೂನು ಆಗದಂತೆ ತಡೆಗಟ್ಟಲು<br>— ಉತ್ತಮ ಸಂಸದೀಯಪಟುಗಳ ಆಯ್ಕೆಗೆ ಅವಕಾಶ | 2 |
| 31. | ರಾಜ್ಯಪಾಲರ ಹಣಕಾಸಿನ ಅಧಿಕಾರಗಳನ್ನು ತಿಳಿಸಿ.<br>*ಉತ್ತರ :*<br>— ಪ್ರಾಕೃತಿಕ ವಿಕೋಪದಂತಹ ತುರ್ತು ಸಂದರ್ಭಗಳಲ್ಲಿ ಹಣ ಪಡೆಯುವ ಅಧಿಕಾರ<br>— ರಾಜ್ಯ ಹಣಕಾಸು ಆಯೋಗದ ನೇಮಕ<br>— ಹಣಕಾಸು ಮಸೂದೆಗೆ ಪೂರ್ವಾನುಮತಿ | 2 |
| 32. | ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ಸಾಮಾಜಿಕ ಪರಿವರ್ತನೆಯ ನ್ಯಾಯಿಕ ಸಾಧನವೆಂದು ಪರಿಗಣಿಸಲಾಗಿದೆ. ಏಕೆ ?<br>*ಉತ್ತರ :*<br>— ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ವಿಷಯಗಳ ಮೇಲೆ ಒಬ್ಬ ವ್ಯಕ್ತಿ, ಸಂಘಟನೆ ಅಥವಾ ಸಂಸ್ಥೆ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲು ಮಾಡುವುದು.<br>— ಜನರ ಹಿತರಕ್ಷಣೆಗಾಗಿ ಮೊಕದ್ದಮೆ ಹೂಡಬಹುದು. | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 33. | ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳಿಗಿರುವ ವಿನಾಯಿತಿಗಳನ್ನು ಪಟ್ಟಿ ಮಾಡಿ.<br>***ಉತ್ತರ :***<br>— ತೀರ್ಪುಗಳನ್ನು ಪೂರ್ವಾಗ್ರಹ ಪೀಡಿತರಾಗಿ ಟೀಕಿಸುವಂತಿಲ್ಲ<br>— ನ್ಯಾಯಾಧೀಶರ ವೇತನ ಕಡಿತಗೊಳಿಸುವಂತಿಲ್ಲ<br>— ಉಚಿತ ನಿವಾಸ, ಸಾರಿಗೆ, ವಿದ್ಯುತ್ ಮುಂತಾದ ಸೌಲಭ್ಯಗಳು | 2 |
| 34. | ಹಣಕಾಸಿನ ವಿಷಯದಲ್ಲಿ ಲೋಕಸಭೆಗೆ ರಾಜ್ಯಸಭೆಗಿಂತ ಹೆಚ್ಚಿನ ಅಧಿಕಾರವಿದೆ. ವಿವರಿಸಿ.<br>***ಉತ್ತರ :***<br>— ಹಣಕಾಸಿನ ಮಸೂದೆಯನ್ನು ಲೋಕಸಭೆಯಲ್ಲಿಯೇ ಮಂಡಿಸಬೇಕು<br>— ಕೇವಲ 14 ದಿನಗಳವರೆಗೆ ಹಣಕಾಸು ಮಸೂದೆಯನ್ನು ತಡೆಹಿಡಿಯಬಹುದು | 2 |
| 35. | ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿ ಅಳವಡಿಸಲಾದ ಉದಾರವಾದಿ ತತ್ವಗಳನ್ನು ತಿಳಿಸಿ.<br>***ಉತ್ತರ :***<br>— ಏಕರೂಪ ನಾಗರೀಕ ಸಂಹಿತೆ<br>— ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸುವುದು<br>— ಉಚಿತ ಮತ್ತು ಕಡ್ಡಾಯ ಶಿಕ್ಷಣ<br>— ಅಂತರ್‌ರಾಷ್ಟ್ರೀಯ ಶಾಂತಿ ಸೌಹಾರ್ದತೆ | 2 |
| 36. | ಭಾರತ ಸಂವಿಧಾನದ ಯಾವ ವಿಧಿಗಳು ರಾಷ್ಟ್ರಪತಿಗಳ ತುರ್ತು ಪರಿಸ್ಥಿತಿಯ ಅಧಿಕಾರಗಳನ್ನು ವಿವರಿಸುತ್ತವೆ ?<br>***ಉತ್ತರ :***<br>— 352 ನೇ ವಿಧಿ<br>— 356 ನೇ ವಿಧಿ<br>— 360 ನೇ ವಿಧಿ | 2 |
| 37. | ಮಾಹಿತಿ ಹಕ್ಕು ಕಾಯ್ದೆಯು ಭ್ರಷ್ಟಾಚಾರವನ್ನು ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ವಿಶ್ಲೇಷಿಸಿ.<br>***ಉತ್ತರ :***<br>— ಆಡಳಿತದಲ್ಲಿ ಪಾರದರ್ಶಕತೆ<br>— ಕಾನೂನಿನ ನ್ಯೂನತೆಗಳನ್ನು ಸರಿಪಡಿಸುವಲ್ಲಿ ಸಹಕಾರಿ<br>— ಸರ್ಕಾರಿ ಅಧಿಕಾರಗಳ ಹೊಣೆಗಾರಿಕೆ ಹೆಚ್ಚಳ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 38. | ಭಾರತವು ಒಂದು ಗಣರಾಜ್ಯವಾಗಿದೆ. ಹೇಗೆ ?<br>***ಉತ್ತರ :***<br>— ರಾಷ್ಟ್ರದ ಮುಖ್ಯಸ್ಥರು ನಿಗದಿತ ಅವಧಿಗೆ ಪ್ರಜೆಗಳಿಂದ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಆಯ್ಕೆ<br>— ರಾಷ್ಟ್ರದ ಮುಖ್ಯಸ್ಥರು ಆನುವಂಶಿಕವಾಗಿ ಮುಂದುವರೆಯುವುದಿಲ್ಲ | 2 |
| 39. | ಸಮಾನತೆಯನ್ನು ವ್ಯಾಖ್ಯಾನಿಸಿ.<br>***ಉತ್ತರ :***<br>— ಯಾವುದೇ ಧರ್ಮ, ಜಾತಿ, ಲಿಂಗ, ಬಣ್ಣ ಮುಂತಾದವುಗಳ ಆಧಾರದ ಮೇಲೆ ತಾರತಮ್ಯ ಮಾಡಬಾರದು.<br>— ಸಮಾನ ಸ್ಥಾನ ಮತ್ತು ಸಮಾನ ಅವಕಾಶಗಳು | 2 |
| 40. | 1947 ರ ಭಾರತ ಸ್ವಾತಂತ್ರ್ಯ ಕಾಯ್ದೆಯ ನಿಬಂಧನಗಳು ಯಾವುವು ?<br>***ಉತ್ತರ :***<br>— ಭಾರತ ಮತ್ತು ಪಾಕಿಸ್ತಾನ ಪ್ರತ್ಯೇಕ ರಾಷ್ಟ್ರಗಳ ಉದಯ<br>— ದೇಶೀಯ ಸಂಸ್ಥಾನಗಳಿಗೆ ಮೂರು ಆಯ್ಕೆ<br>— ಭಾರತ ಒಕ್ಕೂಟಕ್ಕೆ ಸೇರುವ ಇಲ್ಲವೆ ಪಾಕಿಸ್ತಾನಕ್ಕೆ ಸೇರುವ ಅಥವಾ ಸ್ವತಂತ್ರವಾಗಿ ಉಳಿಯುವ ಅವಕಾಶ | 2 |
| V. | **ಈ ಕೆಳಗಿನ ಪ್ರಶ್ನೆಗಳಿಗೆ *ಮೂರರಿಂದ ಆರು* ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$ | |
| 41. | ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯಗಳನ್ನು ವಿವರಿಸಿ.<br>***ಉತ್ತರ :***<br>— ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವುದು<br>— ನೇಮಕಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಸಲಹೆ<br>— ಬಡ್ತಿ ಮತ್ತು ವರ್ಗಾವಣೆಗೆ ಸಂಬಂಧಿಸಿದಂತೆ ಸಲಹೆ<br>— ಸೇವಾವಧಿ ವಿಸ್ತರಣೆ ಹಾಗೂ ನಿವೃತ್ತ ಅಧಿಕಾರಿಗಳ ಮರುನೇಮಕಾತಿ<br>— ವಾರ್ಷಿಕ ವರದಿ<br>— ರಾಜ್ಯಪಾಲರಿಗೆ ಸಲಹೆ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 42. | ಅಧೀನ ನ್ಯಾಯಾಲಯಗಳು ಉಚ್ಚ ನ್ಯಾಯಾಲಯದಿಂದ ಹೇಗೆ ನಿಯಂತ್ರಿಸಲ್ಪಟ್ಟಿವೆ ?<br>*ಉತ್ತರ :*<br>— ಅಧೀನ ನ್ಯಾಯಾಲಯದ ಆಡಳಿತ ಸಿಬ್ಬಂದಿ ನೇಮಕ<br>— ಆಡಳಿತ ಸಿಬ್ಬಂದಿಯ ಸೇವಾ ನಿಯಮಗಳ ರೂಪಿಸುವ ಅಧಿಕಾರ<br>— ಸಿಬ್ಬಂದಿಯ ವೇತನ, ಭತ್ಯೆ, ರಜೆ, ನಿವೃತ್ತಿ ವೇತನ ನಿಯಮಗಳನ್ನು ರೂಪಿಸುವ ಅಧಿಕಾರ | 3 |
| 43. | ಕೇಂದ್ರ ಶಾಸಕಾಂಗವು ಸರ್ಕಾರವನ್ನು ಹೇಗೆ ನಿಯಂತ್ರಿಸುತ್ತದೆ ?<br>*ಉತ್ತರ :*<br>— ಪ್ರಶ್ನಾವೇಳೆ<br>— ಶೂನ್ಯವೇಳೆ<br>— ಗಮನ ಸೆಳೆಯುವ ಸೂಚನೆ<br>— ನಿಲುವಳಿ ಸೂಚನೆ<br>— ಹಕ್ಕು ಚ್ಯುತಿ ಮಂಡನಾ ನಿರ್ಣಯ<br>— ಕಡಿತ ನಿರ್ಣಯ<br>— ಸದನದ ಬಾವಿ<br>— ಅವಿಶ್ವಾಸ ನಿರ್ಣಯ (ಯಾವುದಾದರೂ ಆರು) $6 \times ½$ | 3 |
| 44. | ರಾಜ್ಯನೀತಿ ನಿರ್ದೇಶಕ ತತ್ವಗಳಲ್ಲಿ ಅಳವಡಿಸಲಾದ ಗಾಂಧೀವಾದದ ತತ್ವಗಳನ್ನು ತಿಳಿಸಿ.<br>*ಉತ್ತರ :*<br>— ಪಂಚಾಯತ್ ರಾಜ್ ವ್ಯವಸ್ಥೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಪಾನ ನಿಷೇಧ ಜಾರಿ<br>— ಸಹಕಾರ ತತ್ವದ ಹಿನ್ನಲೆಯಲ್ಲಿ ಗ್ರಾಮೀಣ ಕೈಗಾರಿಕೆಗಳ ಪ್ರೋತ್ಸಾಹ<br>— ವೈಜ್ಞಾನಿಕ ಕೃಷಿ ಮತ್ತು ಪಶುಪಾಲನೆ<br>— ಹಿಂದುಳಿದ ಹಾಗೂ ದುರ್ಬಲ ವರ್ಗಗಳ ಆರ್ಥಿಕ ಸುಧಾರಣೆ<br>— ಗೋಹತ್ಯೆ ನಿಷೇಧ | 3 |
| 45. | ಸರ್ವೋಚ್ಛ ನ್ಯಾಯಾಲಯವು ಮೂಲಭೂತ ಹಕ್ಕುಗಳಿಗೆ ಧಕ್ಕೆಯುಂಟಾದಾಗ ಹೊರಡಿಸುವ ಐದು ರೀತಿಯ ಆಜ್ಞೆಗಳನ್ನು ಹೆಸರಿಸಿ.<br>*ಉತ್ತರ :*<br>— ಬಂಧೀ ಪ್ರತ್ಯಕ್ಷೀಕರಣ<br>— ಪರಮಾದೇಶ<br>— ಪ್ರತಿಬಂಧಕಾಜ್ಞೆ<br>— ಉತ್ಪ್ರೇಕ್ಷಣಾ ಲೇಖ<br>— ಅಧಿಕಾರ ಲೇಖ | 3 |
| 46. | ಭಾರತದ ಸಂವಿಧಾನದಲ್ಲಿರುವ ಪ್ರಮುಖ ಅಂಶಗಳನ್ನು 1935 ರ ಭಾರತ ಸರ್ಕಾರದ ಕಾಯ್ದೆಯಿಂದ ತೆಗೆದುಕೊಳ್ಳಲಾಗಿದೆ. ವಿವರಿಸಿ.<br>*ಉತ್ತರ :*<br>— ಒಕ್ಕೂಟ ಮತ್ತು ಪ್ರಾಂತೀಯ ಸ್ವಯಂ ಅಧಿಕಾರ<br>— ಕೇಂದ್ರದಲ್ಲಿ ದ್ವಿ–ಸರ್ಕಾರ ಪದ್ಧತಿ<br>— ದ್ವಿ–ಸದನ ಶಾಸಕಾಂಗ<br>— ಕೇಂದ್ರ ಪಟ್ಟಿ ಮತ್ತು ರಾಜ್ಯಪಟ್ಟಿ<br>— ರಿಸರ್ವ್ ಬ್ಯಾಂಕ್ ಸ್ಥಾಪನೆ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VI. | ***ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :*** $1 \times 4 = 4$ | |
| 47. | ರಾಜ್ಯನೀತಿ ನಿರ್ದೇಶಕ ತತ್ವಗಳು ಮೂಲಭೂತ ಹಕ್ಕುಗಳಿಗಿಂತ ಭಿನ್ನವಾಗಿವೆ. ಹೇಗೆ ?<br>***ಉತ್ತರ :***<br>***ರಾಜ್ಯನೀತಿ ನಿರ್ದೇಶಕ ತತ್ವಗಳು*** / ***ಮೂಲಭೂತ ಹಕ್ಕುಗಳು***<br>— ಸಕಾರಾತ್ಮಕ / — ನಕಾರಾತ್ಮಕ<br>— ನ್ಯಾಯ ನಿರ್ದೇಶಿತವಾಗಿರುವುದಿಲ್ಲ / — ನ್ಯಾಯಾರ್ಹವಾಗಿವೆ<br>— ಸಮಾಜ ಕೇಂದ್ರಿತ / — ವ್ಯಕ್ತಿ ಕೇಂದ್ರಿತ<br>— ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವದ ಸಂವರ್ಧನೆಗೆ ಪೂರಕ / — ರಾಜಕೀಯ ಪ್ರಜಾಪ್ರಭುತ್ವದ ಅಭಿವೃದ್ಧಿಗೆ ಪೂರಕ<br>— ಸರ್ಕಾರದ ನಿರ್ದೇಶಕ ಗುರಿಗಳು / — ನಿರ್ದೇಶಿತ ಗುರಿಗಳು<br>(ಯಾವುದಾದರೂ ನಾಲ್ಕು) $4 \times 1$ | 4 |